**Government of Karnataka**
**SUVARNA AROGYA SURAKSHA TRUST**
**(Department of Health & Family Welfare)**
***Bangalore Metropolitan Transport Corporation, TTMC "A" Block,***
***4th Floor, Shanthinagar, K.H. Road, Bangalore-560 027,***
***Phone: 080-22536200, Fax: 080-22536221 E-mail: directorsast@gmail.com***

HFW/SAST/MM/34/ 2019-2020 Date:30.03.2020

# ಸುತ್ತೋಲೆ

**ವಿಷಯ:** ಕೋವಿಡ್ 19 ಪ್ರಕರಣಗಳು ಉಲ್ಬಣಿಸುತ್ತಿರುವ ಕಾರಣ ಜಿಲ್ಲಾ ಆಸ್ಪತ್ರೆಗಳನ್ನು ಶಂಕಿತ ಕೋವಿಡ್ 19 ಹಾಗೂ ಧೃಡಪಟ್ಟ ಪ್ರಕರಣಗಳ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗಳನ್ನು ನಿಗಧಿಪಡಿಸುವ ನಿಟ್ಟಿನಲ್ಲಿ ತೆಗೆದುಕೊಳ್ಳಬೇಕಾಗಿರುವ ಕ್ರಮಗಳ ಬಗ್ಗೆ

**ಉಲ್ಲೇಖ:** ಸರ್ಕಾರದ ಪತ್ರಸಂಖ್ಯೆ:ಆಕುಕ 68 ಸಿಜಿಇ 2020, ಬೆಂಗಳೂರು, ದಿ:29.03.2020

*****

ಉಲ್ಲೇಖಿತ ಸರ್ಕಾರಿ ಆದೇಶದನ್ವಯ, ಜಿಲ್ಲಾಧಿಕಾರಿಗಳು ಜಿಲ್ಲಾ ಆಸ್ಪತ್ರೆಗಳನ್ನು ಕೋವಿಡ್–19 ಆಸ್ಪತ್ರೆ ಎಂದು ನಿರ್ಧರಿಸಿ/ಘೋಷಿಸಿ, ಜಿಲ್ಲಾ ಆಸ್ಪತ್ರೆಗಳಿಗೆ ಪರ್ಯಾಯ ಚಿಕಿತ್ಸೆ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಆಸ್ಪತ್ರೆಗಳನ್ನು ವೈದ್ಯಕೀಯ ಕಾಲೇಜು/ಶಿಕ್ಷಣ ಆಸ್ಪತ್ರೆಗಳನ್ನು ಗುರುತಿಸ ಬೇಕಾಗಿದೆ. ಈ ರೀತಿ ಕೋವಿಡ್ 19 ಚಿಕಿತ್ಸೆಗಾಗಿ ನಿಗದಿ ಪಡಿಸಿದ ಜಿಲ್ಲಾಸ್ಪತ್ರೆಗಳಿಗೆ ಬರುವ ರೋಗಿಗಳಿಗಾಗಿ ನೋಂದಾಯಿತ ಹಾಗೂ ನೋಂದಾಯಿತವಾಗದ ಖಾಸಗಿ ಆಸ್ಪತ್ರೆಯ ಪ್ರಸ್ತಾವನೆಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅನುಮೋದನೆ ಪಡೆದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸಲ್ಲಿಸತಕ್ಕದ್ದು, ನೋಂದಾಯಿತವಾಗದಿದ್ದಲ್ಲಿ ತಕ್ಷಣವೇ ನೋಂದಾವಣೆ ಪ್ರಕ್ರಿಯೆ ಪ್ರಾರಂಭ ಮಾಡಿ, ನೋಂದಣಿ ಅರ್ಜಿ, ಜಿಲ್ಲಾಧಿಕಾರಿಗಳಿಂದ ಕೋವಿಡ್–19 ಗಾಗಿ ಜಿಲ್ಲಾ ಆಸ್ಪತ್ರೆಯನ್ನು ಘೋಷಿಸಿ ಪರ್ಯಾಯವಾಗಿ ಗುರುತಿಸಿರುವ ಖಾಸಗಿ ಆಸ್ಪತ್ರೆ ಸೂಚನಾ ಪತ್ರ, ಕೆಪಿಎಂಇ ನೋಂದಣಿ ಅರ್ಜಿ, ಮಾಲಿನ್ಯ ನಿಯಂತ್ರಣ ಮಂಡಳಿ ಪರವಾನಗಿ ಧೃಡೀಕರಣ ಮತ್ತು ಎಇಆರ್‌ಬಿ ಪತ್ರಗಳನ್ನು ಆನ್‌ಲೈನ್ ಮುಖಾಂತರ ಸಲ್ಲಿಸಲು ಸೂಚಿಸಿದೆ. ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಛೇರಿಯಲ್ಲಿ ತಾತ್ಕಾಲಿಕ ನೋಂದಣಿ ಪ್ರಕ್ರಿಯೆಯನ್ನು ಪೂರ್ತಿಗೊಳಿಸಿ User ID, Password ನೀಡಲಾಗುವುದು. ಈ ಪ್ರಕ್ರಿಯೆಯನ್ನು ತುರ್ತಾಗಿ ಕೈಗೊಳ್ಳಬೇಕಾಗಿದೆ.

ಉಲ್ಲೇಖಿತ ಸರ್ಕಾರಿ ಆದೇಶದನ್ವಯ, ಎಬಿಎಆರ್‌ಕೆ ಯೋಜನೆಯಡಿ ನಿಗದಿಯಾಗಿರುವ ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸೆಗಳನ್ನು ಗುರುತಿಸಿದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಈ ಸಾಮಾನ್ಯ ದ್ವಿತೀಯ ಹಂತದ ಚಿಕಿತ್ಸಾ ವಿಧಾನಗಳನ್ನು ಆನ್‌ಲೈನ್ ಮುಖಾಂತರ ಆರೋಗ್ಯ ಮಿತ್ರರು ಆಸ್ಪತ್ರೆಗಳಿಂದ ಸಂಪೂರ್ಣ ಮಾಹಿತಿ ಪಡೆದು ಅಪ್‌ಲೋಡ್ ಮಾಡತಕ್ಕದ್ದು ಮತ್ತು ಪೂರ್ವಾನುಮತಿ (ಪ್ರೀಯಾಥ್) ಅನುಮೋದನೆಗೊಂಡ ನಂತರ ಆಸ್ಪತ್ರೆಯವರು ಚಿಕಿತ್ಸಾ ವಿಧಾನ ಕೈಗೊಳ್ಳಬಹುದಾಗಿದೆ. ಈ ಪ್ರಕ್ರಿಯೆಯನ್ನು ತ್ವರಿತವಾಗಿ ಅನುಮೋದನೆ ಪಡೆಯುವುದು ಆರೋಗ್ಯ ಮಿತ್ರರ ಜವಾಬ್ದಾರಿಯಾಗಿರುತ್ತದೆ. ಆಯುಷ್ಮಾನ್ ಭಾರತ್ – ಆರೋಗ್ಯ ಕರ್ನಾಟಕ ಯೋಜನೆಯಡಿ ಇಲ್ಲದಿರುವ ಚಿಕಿತ್ಸಾ ಪ್ರಕರಣಗಳ ಚಿಕಿತ್ಸೆಗಳಿಗಾಗಿ ಆಸ್ಪತ್ರೆಗಳನ್ನು ಸಂದರ್ಶಿಸಿದಲ್ಲಿ ಸಿಜಿಹೆಚ್‌ಎಸ್ ದರಗಳ ಆಧಾರದ ಮೇಲೆ ಚಿಕಿತ್ಸೆ ನೀಡಲಾಗುವುದು.

ಜಿಲ್ಲಾಸಂಯೋಜಕರು ಜಿಲ್ಲಾ ಆಸ್ಪತ್ರೆಗಳು ಹಾಗೂ ಕಾರ್ಯ ಒತ್ತಡ ಕಡಿಮೆ ಇರುವ ಆಸ್ಪತ್ರೆಗಳಲ್ಲಿ ನಿಯೋಜನೆ ಮಾಡಿರುವ ಆರೋಗ್ಯ ಮಿತ್ರರನ್ನು ಹಿಂಪಡೆದು ಮೇಲ್ಕಾಣಿಸಿದ ವಿಶೇಷ ಆಸ್ಪತ್ರೆಗಳಲ್ಲಿ ನಿಯೋಜಿಸಿ, ಅವರಿಗೆ ಪೂರ್ವಾನುಮತಿ ಪಡೆಯುವ ಬಗ್ಗೆ ಸೂಕ್ತ ತರಭೇತಿ ನೀಡಿ ವರದಿಯನ್ನು ಪ್ರಾದೇಶಿಕ ಸಮಾಲೋಚಕರಿಗೆ ಹಾಗೂ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಕಛೇರಿಗೆ ಸಲ್ಲಿಸತಕ್ಕದ್ದು.

**ಸಹಿ/–**
**ಕಾರ್ಯಕಾರಿ ನಿರ್ದೇಶಕರು**
**ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್**
**ಬೆಂಗಳೂರು**

**ಪ್ರತಿಯನ್ನು ಮಾಹಿತಿಗಾಗಿ:**

1. ಅಪರ ಮುಖ್ಯ ಕಾರ್ಯದರ್ಶಿ, ವೈದ್ಯಕೀಯ ಶಿಕ್ಷಣ ಇಲಾಖೆ, ವಿಧಾನಸೌಧ, ಬೆಂಗಳೂರು
2. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು
3. ಎಲ್ಲಾ ಜಿಲ್ಲಾಧಿಕಾರಿಗಳು
4. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು
5. ನಿರ್ದೇಶಕರು ವೈದ್ಯಕೀಯ ಶಿಕ್ಷಣ ಇಲಾಖೆ, ವಿಧಾನ ಸೌಧ, ಬೆಂಗಳೂರು
6. ನಿರ್ದೇಶಕರು ವೈದ್ಯಕೀಯ ನಿರ್ವಹಣೆ /ಅಪರೇಷನ್ಸ್/ಹಣಕಾಸು, ಎಸ್ಎಎಸ್‌ಟಿ, ಬೆಂಗಳೂರು
7. ಜಂಟಿ ನಿರ್ದೇಶಕರು, ಎಬಿಎಆರ್‌ಕೆ, ಆಕುಕ ನಿರ್ದೇಶನಾಲಯ, ಆನಂದರಾವ್ ವೃತ್ತ, ಬೆಂಗಳೂರು
8. ಯೋಜನಾ ವ್ಯವಸ್ಥಾಪಕರು, ಎಸ್ಎಎಸ್‌ಟಿ, ಬೆಂಗಳೂರು
9. ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು
10. ಎಲ್ಲಾ ಜಿಲ್ಲಾ ಶಸ್ತ್ರ ಚಿಕಿತ್ಸಕರು
11. ಎಲ್ಲಾ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಸಂಸ್ಥೆಗಳು
12. ಕಛೇರಿ ಪ್ರತಿ